## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ಆರ್. ನಿರಾಣಿ ರವರು ನಿಯಮ–330ರಡಿ ನೀಡಿರುವ ಸೂಚನೆಗೆ ಮಾಹಿತಿ.

ವಿಷಯ : ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಕಲ್ಪಿಸಲಾದ ಪುನರ್‌ವಸತಿ ಮತ್ತು ಪುನರ್ ನಿರ್ಮಾಣದ ಕುರಿತು.

***

ಉತ್ತರಗಳು:

**1. ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ–1 ಮತ್ತು ಹಂತ–2ರ ಸಾರಾಂಶ**

ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ–1 ಮತ್ತು ಹಂತ–2ರಡಿ ಮುಳುಗಡೆಯಾಗುವ ಗ್ರಾಮಗಳಿಗೆ 136 ಪುನರ್‌ವಸತಿ ಕೇಂದ್ರಗಳನ್ನು ನಿರ್ಮಿಸಲಾಗಿರುತ್ತದೆ. ಈ ಪೂರ್ವದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಾದ 30 ಪುನರ್‌ವಸತಿ ಕೇಂದ್ರಗಳನ್ನು ಹೊರತುಪಡಿಸಿ, 106 ಪುನರ್ವಸತಿ ಕೇಂದ್ರಗಳನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯತಿ/ಇಲಾಖೆಗಳಿಗೆ ಯಥಾ ಸ್ಥಿತಿಯಲ್ಲಿದ್ದಂತೆ ಮುಂದಿನ ನಿರ್ವಹಣೆಗಾಗಿ ಹಸ್ತಾಂತರಿಸುವುದಕ್ಕೆ ಹಾಗೂ ಇವುಗಳಲ್ಲಿ ಬಾಕಿ/ಮುಂದುವರೆದ ಕಾಮಗಾರಿಗಳಿಗೆ ಅವಶ್ಯವಿರುವ ಒಂದಾವರ್ತಿ ಅನುದಾನದೊಂದಿಗೆ ಹಸ್ತಾಂತರಿಸಲು ದಿನಾಂಕ 08.07.2016ರ ಸರ್ಕಾರದ ಆದೇಶದಲ್ಲಿ ರೂ.191.50 ಕೋಟಿಗಳನ್ನು ಸಂಪೂರ್ಣವಾಗಿ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಿಂದ ಒದಗಿಸಿ, ಆಯಾ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಹಸ್ತಾಂತರಿಸಲು ಆದೇಶಿಸಲಾಗಿರುತ್ತದೆ. ಈ 106 ಪುನರ್ವಸತಿ ಕೇಂದ್ರಗಳಲ್ಲಿ 104 ಪುನರ್ವಸತಿ ಕೇಂದ್ರಗಳನ್ನು ಈಗಾಗಲೇ ಸ್ಥಳೀಯ ಸಂಸ್ಥೆಗಳಿಗೆ 2017ರಲ್ಲಿ ಹಸ್ತಾಂತರಿಸಲಾಗಿದೆ. ಬಾಕಿ ಉಳಿದ (1) ಕಲಾದಗಿ ಹಾಗೂ (2) ಯಡಹಳ್ಳಿ ಜಿ & ಯಡಹಳ್ಳಿ (ಮುಧೋಳ ಹತ್ತಿರ) ಪುನರ್ವಸತಿ ಕೇಂದ್ರಗಳ ಸಂತ್ರಸ್ಥರಿಗೆ ಹಕ್ಕುಪತ್ರ ವಿತರಣೆ ಚಾಲ್ತಿಯಲ್ಲಿದ್ದು, ಹಕ್ಕುಪತ್ರ ವಿತರಣೆ ಬಳಿಕ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲು ಕ್ರಮ ಕೈಗೊಳ್ಳಲಾಗುವುದು. ಸದರಿ ಆದೇಶದನ್ವಯ ಈಗಾಗಲೇ ರೂ.166.19 ಕೋಟಿ ಅನುದಾನವನ್ನು ಬಿಡುಗಡೆಗೊಳಿಸಲಾಗಿದ್ದು, ಸ್ಥಳೀಯ ಸಂಸ್ಥೆಗಳಿಂದ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳು ಭಾಗಶಃ ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ.

1. ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ–3ರ ಸಾರಾಂಶ:

(i) ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3 ರಡಿ 20 ಮುಳುಗಡೆ ಬಾಧಿತ ಗ್ರಾಮಗಳಿಗೆ 24 ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲು ಯೋಜಿಸಲಾಗಿದೆ. ಇವುಗಳಲ್ಲಿ ಗದ್ದನಕೇರಿ ಗ್ರಾಮವನ್ನು ಕೈಬಿಡಲಾಗಿದೆ. ಸದರಿ ಪುನರ್ವಸತಿ ಕೇಂದ್ರಗಳಲ್ಲಿ ಈಗಾಗಲೆ 06 ಪುನರ್ವಸತಿ ಕೇಂದ್ರಗಳ ಲೇಔಟ್‌ಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಮೂರು ಪುನರ್ವಸತಿ ಕೇಂದ್ರಗಳಲ್ಲಿ ಹೊಸ ಭೂಸ್ವಾಧೀನದ ನಿಯಮಾವಳಿಯಂತೆ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಸದರಿ ಆರ್ಥಿಕ ವರ್ಷದಲ್ಲಿ ಬಾಕಿ ಪುನರ್ವಸತಿ ಕೇಂದ್ರಗಳಲ್ಲಿ ನಿರ್ಮಾಣ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ. ಇನ್ನೂ ಬಾಕಿ ಉಳಿದ 12 ಗ್ರಾಮಗಳಿಗೆ ಪುನರ್‌ವಸತಿ ಕಲ್ಪಿಸುವ ಕುರಿತಂತೆ ದಿನಾಂಕ 28.10.2021ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ, ನವೀನ ತಾಂತ್ರಿಕ ಪರಿಹಾರದ ಬದಲಾಗಿ ಬಾಕಿ 12 ಗ್ರಾಮಗಳ ಸ್ಥಳಾಂತರ ಹಾಗೂ ಪುನರ್‌ವಸತಿ ಕಲ್ಪಿಸಲು ಮತ್ತು ಅಗತ್ಯ ಹೆಚ್ಚುವರಿ ಅನುದಾನ ಕಲ್ಪಿಸಲು ನಿರ್ಧರಿಸಲಾಗಿದ್ದು, ಅದರಂತೆ ಮುಂದಿನ ಅಗತ್ಯ ಕ್ರಮಗಳನ್ನು ಜರುಗಿಸಲಾಗುತ್ತಿದೆ.

(ii) ಪ್ರಸ್ತುತ, ಪುನರ್ವಸತಿ ಕೇಂದ್ರಗಳನ್ನು ಉತ್ತಮ ಗುಣಮಟ್ಟದೊಂದಿಗೆ ನಿರ್ಮಿಸಿ, ಸಂತ್ರಸ್ಥರಿಗೆ ಯಾವುದೇ ತೊಂದರೆಯಾಗದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.

3. ನಾರಾಯಣಪುರ ಆಣೆಕಟ್ಟಿನ ಹಿನ್ನೀರಿನ ಪ್ರವಾಹದಲ್ಲಿ ಬಾಧಿತಗೊಳಗಾದ ಗ್ರಾಮಗಳ ಕುರಿತು:

(i) ನಾರಾಯಣಪುರ ಆಣೆಕಟ್ಟಿನ ಹಿನ್ನೀರಿನ ಪ್ರವಾಹದಿಂದ ಬಾಧಿತಗೊಳಗಾದ ಹುನಗುಂದ ತಾಲೂಕಿನ ಒಟ್ಟಾರೆ 11+3=14 ಪುನರ್ವಸತಿ ಕೇಂದ್ರಗಳಲ್ಲಿ, 13 ಪುನರ್ವಸತಿ ಕೇಂದ್ರಗಳ ಲೇಔಟ್‌ಗಳ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಸದರಿ ಪುನರ್ವಸತಿ ಕೇಂದ್ರಗಳಲ್ಲಿ ಸಂತ್ರಸ್ಥರಿಗೆ ಪುನರ್ವಸತಿ ಅಧಿಕಾರಿಗಳ ಕಛೇರಿಯಿಂದ ಹಕ್ಕು ಪತ್ರ ವಿತರಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

(ii) ಹುನಗುಂದ ತಾಲೂಕಿನ 10 ಪುನರ್ವಸತಿ ಕೇಂದ್ರಗಳಲ್ಲಿ, ವಿದ್ಯುದ್ದೀಕರಣದ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಬಾಕಿ ಉಳಿದ ಅನುಪಕಟ್ಟಿ, ಬಿಸನಾಳಕೊಪ್ಪ ಭಾಗ–1 ಮತ್ತು ಇದ್ದಲಗಿ

ಪುನರ್ವಸತಿ ಕೇಂದ್ರಗಳಲ್ಲಿ ವಿದ್ಯುದ್ದೀಕರಣದ ಕಾಮಗಾರಿಗಾಗಿ ಅಂದಾಜು ಪತ್ರಿಕೆ ಸಲ್ಲಿಸಲು ಹೆಸ್ಕಾಂ ಇಲಾಖೆಗೆ ಪತ್ರ ಬರೆಯಲಾಗಿದೆ.

(iii) ಹುನಗುಂದ ತಾಲ್ಲೂಕಿನ ಒಟ್ಟಾರೆ ಪುನರ್ವಸತಿ ಕೇಂದ್ರಗಳಲ್ಲಿ, ಎಮ್ಮೆಟ್ಟಿ ಪುನರ್ವಸತಿ ಕೇಂದ್ರಕ್ಕೆ (ನ್ಯಾಯಾಲಯದಲ್ಲಿ ದಾವೆ ಇರುವುದರಿಂದ) ಹೊರತುಪಡಿಸಿ ಉಳಿದ ಎಲ್ಲ ಪುನರ್ವಸತಿ ಕೇಂದ್ರಗಳಿಗೆ ಲೇಔಟ್ ನಿರ್ಮಾಣ ಕಾರ್ಯ ಪೂರ್ಣಗೊಳಿಸಲಾಗಿದೆ ಹಾಗೂ ಶುದ್ಧ ಕುಡಿಯುವ ನೀರು ಸೌಲಭ್ಯಕ್ಕಾಗಿ, ಸದರಿ ಪುನರ್ವಸತಿ ಕೇಂದ್ರಗಳಿಗೆ, ಬಹುಹಳ್ಳಿ ಶುದ್ಧ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಪೂರ್ಣಗೊಳಿಸಲಾಗಿದೆ.

4. ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-3ರ ಪುನರ್ವಸತಿ ಕೇಂದ್ರಗಳ ಪ್ರಗತಿಯ ಸಾರಾಂಶ:

| | |
|---|---|
| **ಪುನರ್ವಸತಿ ಕೇಂದ್ರಗಳು**<br>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿ 20 ಮುಳುಗಡೆ ಬಾಧಿತ ಗ್ರಾಮಗಳಿಗೆ ಒಟ್ಟಾರೆ 24 ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲು ಯೋಜಿಸಲಾಗಿದೆ.<br><br>23-ಪುನರ್ವಸತಿ ಕೇಂದ್ರಗಳ ಜಮೀನು-4648 ಎ-33 ಗುಂಟೆ | 1. 3 ಪುನರ್ವಸತಿ ಕೇಂದ್ರಗಳಲ್ಲಿ ಲೇಔಟ್ ರಚನೆ ಕಾರ್ಯ ಪೂರ್ಣಗೊಂಡಿದ್ದು, ಆಂತರಿಕ ರಸ್ತೆಗಳ ಖಡೀಕರಣ, ಬದಿಚರಂಡಿ, ಅಡ್ಡಚರಂಡಿ, ಸಾರ್ವಜನಿಕ ಕಾಮಗಾರಿಗಳು ಪ್ರಗತಿಯಲ್ಲಿವೆ.<br>2. 6 ಪುನರ್ವಸತಿ ಕೇಂದ್ರಗಳ ಲೇಔಟ್ ರಚನೆ ಅನುಮೋದನೆಯಾಗಿದ್ದು, ಇವುಗಳಲ್ಲಿ 3 ಪುನರ್ವಸತಿ ಕೇಂದ್ರಗಳ ನಿವೇಶನ ಗುರುತಿಸುವ ಕಾರ್ಯಕ್ಕೆ ಟೆಂಡರ್ ಕರೆಯಲಾಗಿದೆ. 6 ಪುನರ್ವಸತಿ ಕೇಂದ್ರಗಳ, ಒಟ್ಟಾರೆ ಅಭಿವೃದ್ಧಿಗಾಗಿ 2022-23ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ನಿರ್ಮಾಣಕ್ಕಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.<br>3. 1 ಪುನರ್ವಸತಿ ಕೇಂದ್ರ ಲೇಔಟ್ ರಚನೆ ಅನುಮೋದನೆ ಹಂತದಲ್ಲಿದೆ.<br>4. 4 ಪುನರ್ವಸತಿ ಕೇಂದ್ರಗಳ ಜಮೀನಿನ ಸಹಮೋಜನಿ ಪೂರ್ಣಗೊಂಡಿದೆ.<br>5. 2 ಪುನರ್ವಸತಿ ಕೇಂದ್ರಗಳ 11(1) ಅಧಿಸೂಚನೆ ಪ್ರಕಟಗೊಂಡಿದೆ.<br>6. 2 ಪುನರ್ವಸತಿ ಕೇಂದ್ರಗಳ 11(1) ಅಧಿಸೂಚನೆ ಪ್ರಕಟಗೊಂಡಿದ್ದು, ಸಹಮೋಜನಿ ಕಾರ್ಯ ಪ್ರಗತಿಯಲ್ಲಿದೆ.<br>7. 2 ಪುನರ್ವಸತಿ ಕೇಂದ್ರಗಳ 11(1) ಅಧಿಸೂಚನೆ ಪ್ರಕಟಗೊಂಡಿದ್ದು, ಸಹಮೋಜನಿ ಭೂಮಾಲೀಕರ ತಡೆಯಂಟಾಗಿದೆ. (ಕಾತರಕಿ & ವಂದಾಲ)<br>8. 2 ಪುನರ್ವಸತಿ ಕೇಂದ್ರಗಳ ಭೂಸ್ವಾಧೀನ ಪ್ರಕರಣ ನ್ಯಾಯಾಲಯದಲ್ಲಿದೆ.<br>9. 1 ಮುಳುಗಡೆ ಗ್ರಾಮಕ್ಕೆ ಸೀಮೀಕೇರಿ ಭಾಗ-2 ಪುನರ್ವಸತಿ ಕೇಂದ್ರದಲ್ಲಿ ನಿವೇಶನ ನೀಡಲು ನಿರ್ಧರಿಸಲಾಗಿದೆ. ಸದರಿ ಪು.ಕೇಂದ್ರ ಅಭಿವೃದ್ಧಿಪಡಿಸಲು 2022-23ನೇ ಸಾಲಿನಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.<br>10. 1 ಪುನರ್ವಸತಿ ಕೇಂದ್ರವನ್ನು ಮುಳುಗಡೆ ವ್ಯಾಪ್ತಿಯಿಂದ ಕೈಬಿಡಲಾಗಿದೆ. (ಗದ್ದನಕೇರಿ ಗ್ರಾಮ) |
| **ಮುಳುಗಡೆ ಬಾಧಿತ ಗ್ರಾಮಗಳು**<br><br>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿ 20 ಮುಳುಗಡೆ ಬಾಧಿತ ಗ್ರಾಮಗಳ ಭೂಸ್ವಾಧೀನದ ಪ್ರಗತಿ.<br><br>**ಒಟ್ಟು-22355 ಕಟ್ಟಡಗಳು** | ○ 4 ಗ್ರಾಮಗಳ ಕಟ್ಟಡಗಳ ಮೌಲ್ಯಮಾಪನಾ ಕಾರ್ಯ ಪ್ರಗತಿಯಲ್ಲಿದೆ.<br>○ 8 ಗ್ರಾಮದ ಕಟ್ಟಡಗಳ ಸಹಮೋಜನಿ ಕಾರ್ಯ ಪೂರ್ಣಗೊಂಡಿದೆ.<br>○ 6 ಗ್ರಾಮಗಳ ಕಟ್ಟಡಗಳ 11(1) ಅಧಿಸೂಚನೆ ಪ್ರಕಟಗೊಂಡಿದ್ದು, ಸಹಮೋಜನಿ ಕಾರ್ಯ ಪ್ರಾರಂಭಿಸಬೇಕಾಗಿದೆ.<br>○ 1 ಗ್ರಾಮದ ಕಟ್ಟಡಗಳ 11(1) ಪ್ರಸ್ತಾವನೆ ಸಲ್ಲಿಸಲಾಗಿದೆ. (ವಂದಾಲ)<br>○ 1 ಗ್ರಾಮದ ಮುಳುಗಡೆ ವ್ಯಾಪ್ತಿಯಿಂದ ಕೈಬಿಡಲಾಗಿದೆ. (ಗದ್ದನಕೇರಿ ಗ್ರಾಮ) |

5. ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ –3ರ ಪುನರ್ವಸತಿ ಮತ್ತು ಪುನರ್‌ನಿರ್ಮಾಣದ ಕಾಮಗಾರಿಗಳ ಪ್ರಗತಿಯ ವಿವರಗಳು.

(ಅ) ಕೃಷ್ಣಾ ಮೇಲ್ದಂಡೆ ಯೋಜನೆಯು ಒಂದು ಅತ್ಯಂತ ಮಹತ್ವ ಪೂರ್ಣ ಯೋಜನೆಯಾಗಿದ್ದು, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ರಡಿಯಲ್ಲಿ ಕಲ್ಪಿಸಲಾದ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣದ ಕಾಮಗಾರಿಗಳಿಗೆ ಸಂಬಂಧಿಸಿದಂತೆ 2021–22 ಹಾಗೂ 2022–23ನೇ ಸಾಲಿನಡಿ ಸಾಧಿಸಲಾದ ಹಾಗೂ ಪ್ರಗತಿಯಲ್ಲಿರುವ ಅಭಿವೃದ್ಧಿ ಕಾಮಗಾರಿಗಳ ವಿವರ.

- ವಿಜಯಪುರ ತಾಲೂಕಿನ ಶಿರಬೂರ (ಮಹಾಲಬಾಗಾಯತ) ಚಿಕ್ಕಗಲಗಲಿ (ಮಹಾಲಬಾಗಾಯತ) ಮತ್ತು ಮುಧೋಳ ತಾಲೂಕಿನ ಜುಂಜುರಕೊಪ್ಪ (ಶಿರಬೂರ–ಚಿಕ್ಕಗಲಗಲಿ) ಪುನರ್ವಸತಿ ಕೇಂದ್ರಗಳಲ್ಲಿ ಹಿಂದಿನ ಆರ್ಥಿಕ ವರ್ಷದ ಪ್ರಗತಿ ರೂ.26.00 ಕೋಟಿ ಸೇರಿ ಈಗಾಗಲೆ ಒಟ್ಟಾರೆ ರೂ.45.00 ಕೋಟಿಗಳ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗಳನ್ನು ನಿರ್ಮಿಸಲಾಗಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿಯೂ ಕೂಡಾ ರೂ.48.00 ಕೋಟಿಗಳ ಅವಕಾಶ ಕಲ್ಪಿಸಿಕೊಳ್ಳಲಾಗಿದೆ.
- ಮುಂದುವರೆದು, ಚಿಕ್ಕೂರ, ಮಾಚಕನೂರ (ವಜ್ರಮಟ್ಟಿ ಭಾಗ), ಕುಂದರಗಿ, ಕೊಪ್ಪ ಎಸ್.ಕೆ, ಬಾವಲತ್ತಿ, ಅಂಕಲಗಿ ಮತ್ತು ಉದಗಟ್ಟಿ ಪುನರ್ವಸತಿ ಕೇಂದ್ರಗಳ ಅಭಿವೃದ್ಧಿಗಾಗಿ 2022–23ನೇ ಸಾಲಿನಲ್ಲಿ ರೂ: 205.00 ಕೋಟಿಗಳ ಅವಕಾಶ ಕಲ್ಪಿಸಿಕೊಳ್ಳಲಾಗಿದೆ.

(ಆ). **ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ರಡಿಯ ಹೊರತುಪಡಿಸಿದ ಕಾಮಗಾರಿಗಳು:**

ಕೃಷ್ಣಾ ಮೇಲ್ದಂಡೆ ಯೋಜನೆಯು ಒಂದು ಅತ್ಯಂತ ಮಹತ್ವ ಪೂರ್ಣ ಯೋಜನೆಯಾಗಿದ್ದು, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ರಡಿಯ ಹೊರತುಪಡಿಸಿದ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣದ ಕಾಮಗಾರಿಗಳಿಗೆ ಸಂಬಂಧಿಸಿದಂತೆ 2021–22 ಹಾಗೂ 2022–23ನೇ ಸಾಲಿನಡಿ ಸಾಧಿಸಲಾದ ಹಾಗೂ ಪ್ರಗತಿಯಲ್ಲಿರುವ ಅಭಿವೃದ್ಧಿ ಕಾಮಗಾರಿಗಳ ವಿವರ.

(i) ಹುನಗುಂದ ತಾಲೂಕಿನ 13 ಪುನರ್ವಸತಿ ಕೇಂದ್ರಗಳ (ಬೊಮ್ಮಣಗಿ ಪುನರ್ವಸತಿ ಕೇಂದ್ರ ಸೇರಿ) ಅಭಿವೃದ್ಧಿಗಾಗಿ 2021–22ನೇ ಸಾಲಿನಲ್ಲಿ ರೂ.18.00 ಕೋಟಿಗಳ ಆರ್ಥಿಕ ಪ್ರಗತಿ ಸಾಧಿಸಿ ಮೂಲಭೂತ ಸೌಕರ್ಯ ನಿರ್ಮಿಸಲಾಗಿದೆ. ಸದರಿ ಪುನರ್ವಸತಿ ಕೇಂದ್ರಗಳ ಪೈಕಿ ಎಮ್ಮೆಟ್ಟಿ ಕೇಂದ್ರದ ಜಮೀನಿನ ನ್ಯಾಯಾಲಯದ ತಡೆಯಾಜ್ಞೆ ಖುಲಾಶೆಯಾದ ತಕ್ಷಣ ಲೇಔಟ್ ರಚನೆ ಪ್ರಾರಂಭಿಸಲಾಗುವುದು.;

(ii) ಜಮಖಂಡಿ ವಿಭಾಗದಡಿ ಕಂಕಣವಾಡಿ, ಯಡಹಳ್ಳಿ ಪುನರ್ವಸತಿ ಕೇಂದ್ರಗಳ ಅಭಿವೃದ್ಧಿಗಾಗಿ ರೂ.15.00 ಕೋಟಿಗಳ ಆರ್ಥಿಕ ಪ್ರಗತಿ ಸಾಧಿಸಿ ಮೂಲಭೂತ ಸೌಕರ್ಯ ನಿರ್ಮಿಸಲಾಗಿದೆ.

(iii) ಮುಧೋಳ ನಗರ ವ್ಯಾಪ್ತಿಯ ಪುನರ್ವಸತಿ ಕೇಂದ್ರಗಳಿಗೆ, ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ರೂ.12.00 ಕೋಟಿಗಳ 03 (ಮೂರು) ಟೆಂಡರ್ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

(iv) ವಿಶೇಷ ಅನುದಾನದಡಿ ಕೋಲ್ಹಾರ ಪುನರ್ವಸತಿ ಕೇಂದ್ರಕ್ಕೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ರೂ.50.00 ಕೋಟಿಗಳ ಕಾಮಗಾರಿಗಳು ಟೆಂಡರಿನ ವಿವಿಧ ಹಂತದಲ್ಲಿವೆ. ಮತ್ತು ಮುದ್ದೇಬಿಹಾಳ ತಾಲೂಕಿನ 10 ಪುನರ್ವಸತಿ ಕೇಂದ್ರಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ರೂ.25.00 ಕೋಟಿಗಳ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. (ಒಟ್ಟಾರೆ–19 ಕಾಮಗಾರಿಗಳು, 07 ಪೂರ್ಣಗೊಂಡಿದ್ದು. 12 ಕಾಮಗಾರಿಗಳು ಪ್ರಗತಿಯಲ್ಲಿವೆ). ಹಾಗೂ ಬೀಳಗಿ ಮತಕ್ಷೇತ್ರದ ಪುನರ್ವಸತಿ ಕೇಂದ್ರಗಳ ಅಭಿವೃದ್ಧಿಗಾಗಿ ರೂ.15.00 ಕೋಟಿಗಳ ಕಾಮಗಾರಿಗಳು ಪ್ರಗತಿಯಲ್ಲಿವೆ. (ಒಟ್ಟಾರೆ–84 ಕಾಮಗಾರಿಗಳು ಪ್ರಗತಿಯಲ್ಲಿವೆ)

(v) ಬಸವನ ಬಾಗೇವಾಡಿ ಕ್ಷೇತ್ರದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ 2022–23ನೇ ಸಾಲಿನಲ್ಲಿ ರೂ.20.00 ಕೋಟಿಗಳ ಅನುದಾನದ ಅವಕಾಶ ಕಲ್ಪಿಸಲಾಗಿದೆ.

ಒಟ್ಟಾರೆ, 2021-22ನೇ ಸಾಲಿಗೆ ಪುನರ್ವಸತಿ ಕೇಂದ್ರಗಳ ಅಭಿವೃದ್ಧಿ ಕಾಮಗಾರಿಗಳಿಗಾಗಿ ರೂ.72.00 ಕೋಟಿಗಳ ಆರ್ಥಿಕ ಪ್ರಗತಿ ಸಾಧಿಸಲಾಗಿದೆ.

(ಇ) 2022-23ನೇ ಸಾಲಿನ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರಡಿಯ ಹೊರತುಪಡಿಸಿದ ಪುನರ್ವಸತಿ ಮತ್ತು ಪುನರ್‌ನಿರ್ಮಾಣದ ಕಾಮಗಾರಿಗಳು:

(i) ಹುನಗುಂದ ತಾಲೂಕಿನ 10 ಪುನರ್ವಸತಿ ಕೇಂದ್ರಗಳು ಹಾಗೂ ಜಮಖಂಡಿ ವಿಭಾಗದ ಕಂಕಣವಾಡಿ, ಯಡಹಳ್ಳಿ ಪುನರ್ವಸತಿ ಕೇಂದ್ರಗಳ ಅಭಿವೃದ್ಧಿಗಾಗಿ ರೂ.34.71 ಕೋಟಿಗಳು.

(ii) ಮುಧೋಳ ನಗರ ವ್ಯಾಪ್ತಿಯ ಪುನರ್ವಸತಿ ಕೇಂದ್ರಗಳಿಗೆ, ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ರೂ.14.20 ಕೋಟಿಗಳು.

(iii) ಎಸ್.ಸಿ.ಪಿ / ಟಿ.ಎಸ್.ಪಿ ಅನುದಾನದಡಿ. ಬಾಗಲಕೋಟೆ ತಾಲ್ಲೂಕಿನ ಶೀಗೀಕೇರಿ ಪುನರ್ವಸತಿ ಕೇಂದ್ರದಲ್ಲಿ ಚರ್ಮ ಕುಶಲಕರ್ಮಿಗಳಿಗೆ ತರಬೇತಿ ಸಂಸ್ಥೆ ನಿರ್ಮಾಣ ಕಾಮಗಾರಿ ರೂ.5.00 ಕೋಟಿಗಳು. (02 ಕಾಮಗಾರಿಗಳು) ಹಾಗೂ ಮುದ್ದೇಬಿಹಾಳ ತಾಲೂಕಿನ ಪುನರ್ವಸತಿ ಕೇಂದ್ರಗಳಲ್ಲಿ ಎಸ್.ಸಿ / ಎಸ್.ಟಿ ಕಾಲೋನಿಗಳ ಅಭಿವೃದ್ಧಿಗಾಗಿ ರೂ.13.01 ಕೋಟಿಗಳ ಅನುದಾನದ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಕರಾರು ಒಪ್ಪಂದ ಜರುಗಿಸಲಾಗಿದೆ.

(iv) ಬಾಗಲಕೋಟೆ ಜಿಲ್ಲೆಯ ಬೀಳಗಿ, ಮತಕ್ಷೇತ್ರದಲ್ಲಿ ಬರುವ 47 ಪುನರ್ವಸತಿ ಕೇಂದ್ರಗಳಲ್ಲಿ ಅವಶ್ಯಕವಿರುವ ಮೂಲಭೂತ ಸೌಕರ್ಯ ಕಾಮಗಾರಿಗಳ ರೂ.40.00 ಕೋಟಿ ಮೊತ್ತದ ಕ್ರಿಯಾ ಯೋಜನೆಯನ್ನು 2022-23ನೇ ಸಾಲಿನ ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್‌ನಿರ್ಮಾಣದ (ಬಾಗಲಕೋಟೆ ಪಟ್ಟಣ ಸೇರಿದಂತೆ) ಕ್ರಿಯಾ ಯೋಜನೆಯ ಉಳಿತಾಯ ಮೊತ್ತದಲ್ಲಿ ಭರಿಸಲು ದಿನಾಂಕ 05.12.2022ರಂದು ಜರುಗಿದ ನಿಗಮದ ನಿರ್ದೇಶಕರ 136ನೇ ಮಂಡಳಿ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ.

(v) ವಿಜಯಪುರ ಜಿಲ್ಲೆಯಡಿ Leather Artisans Skill Development Centre ನಿರ್ಮಾಣ ಕಾಮಗಾರಿಗಾಗಿ ರೂ.9.88 ಕೋಟಿ ಮತ್ತು ಬಾಗಲಕೋಟೆ ಜಿಲ್ಲೆಯಡಿ Leather Artisans Skill Development Centre ನಿರ್ಮಾಣ ಕಾಮಗಾರಿಗಾಗಿ ರೂ.6.24 ಕೋಟಿ ಒಟ್ಟಾರೆ ರೂ.16.12 ಕೋಟಿ ಮೊತ್ತದ ಕಾಮಗಾರಿಗಳು ಅನುಮೋದನೆಗೊಂಡಿದ್ದು, ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.

ಒಟ್ಟಾರೆ, 2022-23ನೇ ಸಾಲಿಗೆ ಪುನರ್ವಸತಿ ಕೇಂದ್ರಗಳ ಮುಂದುವರೆದ ಹಾಗೂ ಹೊಸ ಕಾಮಗಾರಿಗಳ ಕ್ರಿಯಾ ಯೋಜನೆಯಲ್ಲಿ ರೂ.335.00 ಕೋಟಿಗಳಿಗೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿದ್ದು, ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.

ಸಂಖ್ಯೆ:ಜಸಂಇ 10 ಡಬ್ಲ್ಯೂಬಿಎಂ 2023

(ಗೋವಿಂದ ಎಂ.ಕಾರಜೋಳ)
ಜಲ ಸಂಪನ್ಮೂಲ ಸಚಿವರು